doc-401
T-P-2

(1)

R. No KRNN 12 17-11-1974

in ★ ★ ★ ★ ★
58 th Year
ನೇ ವರ್ಷ

ಸ್ವರ್ಣ ಮಹೋತ್ಸವ ನೆರವೇರಿದ ಪತ್ರಿಕೆ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
– For Influential Publicity –

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಸ್ಥಾಪನೆಗಾಗಿ ಎಂ. ಎಸ್. ಕೃಷ್ಣರಾವ್ (3 ಪೈಸೆ

ದೇಶದಲ್ಲಿ ಬಟ್ಟೆಯ ಬೆಲೆ ಇಳಿತ

ನವದೆಹಲಿ– ರಷ್ಯವು ಭಾರತಕ್ಕೆ ಈ ವರ್ಷದಂತೆ ಮುಂದಿನ ವರ್ಷವೂ 3.25 ಲಕ್ಷ ರಸಗೊಬ್ಬರವನ್ನು ಕೊಡುತ್ತದೆ.

ಪ್ರಾಜೆಕ್ಟ್ ಟೈಗರ್, ಡೆಪ್ಯೂಟಿ ಡೈರೆಕ್ಟರ್‌ರವರ ಕಚೇರಿ,
ಲಕ್ಷ್ಮೀವಿಲಾಸ ರಸ್ತೆ, ಮೈಸೂರು – 1

ಪ್ರಕಟಣೆ

ತಾರೀಖು : 30 ನೇ ಅಕ್ಟೋಬರ್, 74 ನಂ. ಡಿಡಿ. ಇಎಂಟಿ/74-75

ಈ ಕೆಳಗೆ ಕಾಣಿಸಿರುವ ಷೆಡ್ಯೂಲಿನಲ್ಲಿ ಸೂಚಿಸಿರುವ ಕೆಲಸಗಳಿಗಾಗಿ ರಜಿಸ್ಟರ್ ಆದ ಕಂಟ್ರಾಕ್ಟರ್‌ಗಳಿಂದ ಕೆಲಸದ ಹೆಸರು ಬರೆದ ಟೆಂಡರ್ ದಾರರಿಂದ ಸೂಕ್ತ ರೀತಿಯಲ್ಲಿ ಸಹಿ ಮಾಡಲಾದ ಮೊಹರಾದ ಟೆಂಡರ್‌ಗಳನ್ನು ಮೈಸೂರಿನಲ್ಲಿರುವ, ಪ್ರಾಜೆಕ್ಟ್ ಟೈಗರ್, ಡೆಪ್ಯೂಟಿ ಡೈರೆಕ್ಟರ್‌ರವರು 28-11-74 ರ ಮಧ್ಯಾಹ್ನ 4 ಗಂಟೆ ವರೆಗೆ ಸ್ವೀಕರಿಸುವರು. ಸ್ವೀಕರಿಸಲಾದ ಟೆಂಡರುಗಳನ್ನು ಸಂದರ್ಭಾನುಸಾರ ಟೆಂಡರ್‌ದಾರರ ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ಒಡೆಯಲಾಗುವುದು.

ಡೆಪ್ಯೂಟಿ

ಈ ಕೆಲಸದ ಹೆಸರು	ಸುಮಾರು ಅಂದಾಜು ಹಣ ರೂ.	ಇ ಎಂ ಡಿ ರೂ	ಕಾಲ ಮಿತಿ
1 ಮೂಲೆಹೊಳೆಯಲ್ಲಿ ಫಾಲಿಸ್ ಗಾರ್ಡ್‌ಗಳಿಗೆ ಜೋಡಿ ಕ್ವಾರ್ಟರ್ಸ್ ನಿರ್ಮಿಸುವುದು	24650	1250	31-3-75
2 –ಡಿಟೋ– ಚಾವ್ನಹಳ್ಳದಲ್ಲಿ	24650	1250	31-3-75
3 –ಡಿಟೋ– ಚಿಕ್ಕಬರ್ಗಿಯಲ್ಲಿ	24650	1250	31-3-75

ಸೂಚನೆ :— ಪ್ರತಿ ಕೆಲಸದ ಮುಂದೆ ಸೂಚಿಸಿರುವ ಅರ್ನೆಸ್ಟ್ ಹಣ ಠೇವಣಿಯನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ಇದಕ್ಕೆ ಪಾವತಿ ಮಾಡಬೇಕು ಮತ್ತು ಡೂಪ್ಲಿಕೇಟ್ ಚಲನ್‌ಗಳನ್ನು ಟೆಂಡರ್‌ಗೆ ಜೋಡಿಸಬೇಕು

2 ಟೆಂಡರ್ ಫಾರಂಗಳನ್ನು ಈ ಕಚೇರಿಯಲ್ಲಿ ಕೆಲಸದ ಎಲ್ಲ ದಿನಗಳಲ್ಲಿ ಕಚೇರಿ ಕೆಲಸದ ವೇಳೆಗಳಲ್ಲಿ 27 ನೇ ನವೆಂಬರ್ 1974 ಮಧ್ಯಾಹ್ನ 5-30 ಗಂಟೆ ವರೆಗೆ, ರೂ 5/- ಫ್ಲಸ್ ಮಾರಾಟ ತೆರಿಗೆ ಪ್ರತಿಯೊಂದಕ್ಕೆ ಪಾವತಿ ಮಾಡಿದಲ್ಲಿ ಕೊಡಲಾಗುವುದು.

3 ಕೆಲಸದ ಎಲ್ಲ ದಿನಗಳಲ್ಲಿ ಕಚೇರಿ ವೇಳೆಗಳಲ್ಲಿ ಮೈಸೂರಿನಲ್ಲಿರುವ, ಪ್ರಾಜೆಕ್ಟ್ ಟೈಗರ್, ಡೆಪ್ಯೂಟಿ ಡೈರೆಕ್ಟರ್‌ರವರು ಇವಕೊಡನೆ ಯಾವುದೇ ವಿವರಗಳಿಗಾಗಿ ವ್ಯವಹರಿಸಬಹುದು

ಸಹಿ/- ಕೆ. ಟಿ ಗಣಪತಿ,
ಡೆಪ್ಯೂಟಿ ಡೈರೆಕ್ಟರ್

ಕೆ ಪಿ ಸಿ ಅಧ್ಯಕ್ಷರ ಎಚ್ಚರಿಕೆ

ಬೆಂಗಳೂರು— ಕೆ ಪಿ ಸಿ ಯ ಪಟುನ್ನಪ್ಪಣೆ ಪಡೆಯದೆ ಪಾರ್ಟಿ ಕಾರ್ಯಕರ್ತರು ರಾಜಕೀಯ ಸಮ್ಮೇಳನ ನಡೆಸುವ ಮತ್ತು ನಿಧಿ ಶೇಕರಿಸಬಾರದೆಂದು ಅಧ್ಯಕ್ಷ ಶ್ರೀ ಕೆ ಹೆಚ್. ಪಾಟೀಲರು ಎಚ್ಚರಿಕೆ ನೀಡಿದ್ದಾರೆ.

★

ಬೆತ್ತಲೆ ಸುಂದರಿ

ದಕ್ಷಿಣ ಆಫ್ರಿಕಾದ ಪ್ರಥಮ ಬೆತ್ತಲೆ ಸುಂದರಿ ಸ್ಪರ್ಧೆಯಲ್ಲಿ ಉಮೇದುವಾರಳಾದ 21 ವರ್ಷದ ಬರ್ನಿಟಿಯಾಳಿಗೆ ಕೋರ್ಟು ಬಹಿರಂಗ ಅಸಭ್ಯತೆಗಾಗಿ 288 ಪೌಂಡ್ ದಂಡ ಮತ್ತು ಜುಲ್ಮಾನೆ ವಿಧಿಸಿತು ; ಜೊತೆಗೆ 128 ದಿನಗಳ ಸಸ್ಪೆಂಡೆಡ್ ಜೈಲುವಾಸ ವಿಧಿಸಿತು – ಅವಳ ತಪ್ಪ ಎಲ್ಲಾ ಬಟ್ಟೆಗಳನ್ನು ಕಳಚಿ ಪೂರ್ಣ ಬೆತ್ತಲೆ ಸೃಷ್ಟಿಯಾಗಿದ್ದು ತಪ್ಪಿಗೆ ಆಶ್ಚರ್ಯ ಉಂಟಾಗಿ ಹಿಂಗಾಬಡಿದಂತಾಯಿತೆಂದು, ಇಂತಹ ವಿನೋದವು ಅಸಹ್ಯಕರವೆಂದು ಹೇಳಿದರು.

★

ಮುತ್ತಿನ ಬೆಲೆ

ಅನೇಕರಿಂದ ಜಡ್ಜ್ ವಿಲಿಯಂ ಸ್ಟಾಬ್ರ್‌ರವರು, ಒಂದು ಕಾರ್ ಅಕ್ಸಿಡೆಂಟಲ್ಲಿ ಗಾಯಗೊಂಡು ಮುತ್ತಿಡುವ ಸಾಮರ್ಥ್ಯ ಕಳೆದುಕೊಂಡ ಒಬ್ಬ 23 ವರ್ಷದ ಗೃಹಿಣಿಗೆ ೧೧೦೦ ಡಾಲರು ಪರಿಹಾರ ಕೊಡಲು ಆಜ್ಞೆ ಮಾಡಿದರು – ಈ ಗಾಯಗಳು ಪತಿ ಮತ್ತು ತಾಯಿಯಾದವಳಿಗೆ ಕ್ಷುಲ್ಲಕವಾದುದಲ್ಲವೆಂದು ತೀರ್ಪಿದರು

★

ಮೈಸೂರಿಗೆ ಹೆಚ್ಚು ಸ್ಥಾನ

ಬೆಂಗಳೂರು– ಡಿಲಿಮಿಟೇಷನ್ ಸಮಿತಿ ಮಾಡಿರುವ ಅನೇಕ ಬದಲಾವಣೆಗಳಿಂದ ಕರ್ನಾಟಕಕ್ಕೆ 8 ಶಾಸನಸಭಾ ಸ್ಥಾನ ಮತ್ತು 1 ಲೋಕಸಭಾ ಸ್ಥಾನ ಹೆಚ್ಚಾಗಿ ದೊರೆತಿದೆ.

ಡೆಬನೂಗರು ಕೋರ್ಟಿಗೆ ಹೋಗಲಾಗದು

ನವದೆಹಲಿ— ರಾಜ್ಯಾಂಗ 359 ನೇ ವಿಧಿಯಂತೆ ಮೂಲಭೂತ ಹಕ್ಕಿಗಾಗಿ ಆಂತರ ರಕ್ಷಣಾ ಕಾನೂನು ಸರ್ಕಾರ ಬಂಧಿಸಲ್ಪಡುವ ವ್ಯಕ್ತಿಗಾಗಿ ಡೆಬನೂಗಳು ಕೋರ್ಟಿಗೆ ಹೋಗುವುದನ್ನು ಪ್ರತಿಬಂಧಿಸಿ ಭಾರತಾಧ್ಯಕ್ಷರು ಆಜ್ಞೆ ಹೊರಡಿಸಿದ್ದಾರೆ

★

ಬಟ್ಟೆ ಬೆಲೆ ಇಳಿತಾಯ

ಬೊಂಬಾಯಿ— ಸರಕಾರದ ಆಡಳಿತದ ಬಟ್ಟೆ ಗಿರಣಿಗಳಲ್ಲಿ ಬಟ್ಟೆ ಬೆಲೆ ಶೇಕಡ 20 ರಿಂದ 25 ರವರೆಗೆ ಇಳಿಸಲಾಗಿದೆ.

★

ಕಳುವು

ಮೈಸೂರು– ಜಗನ್ಮೋಹನ ಅರಮನೆಯ ಕಲಾಮಂದಿರದಲ್ಲಿ 52 ಜಪಾನೀ ವಸ್ತು ಚೀನೀ ನಾಣ್ಯಗಳು ಕಳುವಾಗಿವೆ, ಪೋಲೀಸು ತನಿಖೆ ನಡೆಯುತ್ತಿದೆ

★

ಪ್ರತಿ ಚಳುವಳಿ

ಪಾಟ್ನಾ— ಶ್ರೀ ಜಯಪ್ರಕಾಶ ನಾರಾಯಣರ ಚಳುವಳಿ ವಿರುದ್ಧ ರಾಜ್ಯ ಕಾಂಗ್ರೆಸ್ ಏರ್ಪಡಿಸಿದ್ದ ಭಾರಿ ಪ್ರತಿಮೇಳನದಲ್ಲಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಾರೂಆರು ಮಾತನಾಡುತ್ತಾ, ತಾವು ಕಡೆಯವರೆಗೂ ಹೋರಾಡುವದಾಗಿ ಹೇಳಿದರು ; ಪ್ರತಿಚಳವಳಿಯನ್ನು ದೇಶದ ಮೂಲೆಮೂಲೆಗಳಲ್ಲೂ ಪ್ರಾರಂಭಿಸುವುದಾಗಿ ಹೇಳಿದರು.

★

ಕಚ್ಚಿನ ನೀರು

ಬೆಂಗಳೂರು— ಕಚ್ಚಿನ ನೀರನ್ನು ಕಡೆಯುದಿರುವ ಬಗ್ಗೆ, ಕರ್ನಾಟಕ ತನ್ನ ಹಕ್ಕು ಬಾಧ್ಯತೆಯನ್ನು ಸಂಪೂರ್ಣವಾಗಿ ಹೊಂದಿದೆ ಎಂದು ಕರ್ನಾಟಕ ಸರಕಾರ, ತಮಿಳುನಾಡು ಮುಖ್ಯಮಂತ್ರಿ ಶ್ರೀ ಕರುಣಾನಿಧಿಯವರ ಹೇಳಿಕೆಗೆ ಪ್ರತಿಯಾಗಿ ತಿಳಿಸಿದೆ.

ಚಂದ್ರಮಂಡಲದ ದೂತ

ಅಪೊಲೊ 15ರ ಖಗೋಳಯಾತ್ರಿ, ಜೇಮ್ಸ್ ಇರ್ವಿನ್ ಕೊಲರೇಡೊ ಸ್ಪ್ರಿಂಗ್ಸ್ ನಲ್ಲಿ ಕ್ರೈಸ್ತಧರ್ಮ ಪ್ರಚಾರ ಸಂಸ್ಥೆಯೊಂದನ್ನು ಸ್ಥಾಪಿಸಿದ್ದಾನೆ; ಆತ ಪ್ರಪಂಚದ ಎಲ್ಲೆಲ್ಲಿಯೂ ಸಂಚಾರ ಮಾಡುತ್ತಿದ್ದು ತಾನು "ಚಂದ್ರಮಂಡಲದ ದೂತ" ಎಂದು ಕರೆದುಕೊಳ್ಳುತ್ತಿದ್ದಾನೆ: ಲೆಟರ್‌ಹೆಡ್‌ನಲ್ಲಿ ಹೆಸರಾಂತ ಕ್ರೈಸ್ತಮತೀಯನೊಬ್ಬ ಆತನ ಗೌರವಾರ್ಥವಾಗಿ ನೀಡಿದ ಸತ್ಕಾರಕೂಟವೊಂದರಲ್ಲಿ ವಾತನಾಡುತ್ತಾ ಇರ್ವಿನ್ ತಾನು ದೇವರೊಂದಿಗೆ ನೇರವಾದ ಸಂಪರ್ಕ ಸ್ಥಾಪಿಸಿರುವುದಾಗಿಯೂ ಮತ್ತು ದೇವರು ತನಗೆ "ಮೂಲಶಿಲೆ" ಯನ್ನು ಕಂಡುಹಿಡಿಯಲು ಸಹಾಯವನ್ನಿತ್ತಿದ್ದಾನೆಂದೂ ಹೇಳಿದನು. ಪತ್ರಿಕೆಗಳು ಇರ್ವಿನ್ ಚಂದ್ರಮಂಡಲದಿಂದ ತಂದಿರುವ ಶಿಲೆ ನಿಜವಾದ್ದೇನೋ ಸರಿ, ಆದರೆ ಅದು ಮೂಲಶಿಲೆಯಲ್ಲ; ಆದರೆ ಬಹಳ ಕಾಲದಿಂದ ಗೊತ್ತಾಗಿರುವ "ಚಂದ್ರಕಾಂತಮಣಿ" ಆಗಿದೆ ಎಂದು ಹೇಳಿದ್ದಾರೆ

★

ಈಜು

ಅಮೇರಿಕಾ ಪಿಟ್ಸ್‌ಬರ್ಗ್‌ನ ಜಾಕ್ಸ್ 750 ನೆಗೆತದಲ್ಲಿ 441 ಮೈಲಿಗಳನ್ನು ರೋಲರ್ ಕೋಸ್ಟರ್ ರೈಡ್‌ನಲ್ಲಿ 31 ಗಂಟೆಗಳಲ್ಲಿ ಕ್ರಮಿಸಿ ವಿಶ್ವದಾಖಲೆ ಸ್ಥಾಪಿಸಿದ್ದಾನೆ.

★

ಅದೇ ಪತ್ರಿಕೆ ಮತ್ತೆ ಹೊರಟಿತು

18 ವರ್ಷಗಳ ಹಿಂದೆ ನಿಲ್ಲಿಸಲಾಗಿದ್ದ ಗ್ಯಾ ಜೈನಾ ಪ್ಯಾಸ್ ಪತ್ರಿಕೆಯ ಪ್ರಕಟನೆಯು ಬ್ಯಾಂಗ್‌ಕಾಕ್‌ನಲ್ಲಿ ಮತ್ತೆ ಪ್ರಾರಂಭವಾಗಿದೆ – 1937 ರಲ್ಲಿ ಸ್ಥಾಪಿತವಾದ ಈ ಪತ್ರಿಕೆಯನ್ನು 1956 ರಲ್ಲಿ ಸಾರಿತ್ ಥನರಾಟ್ ಸರ್ಕಾರವು ಚೀನಾ ವಿರುದ್ಧ ಚಳವಳಿಯಲ್ಲಿ ನಿಲ್ಲಿಸಿತ್ತು.

★

ಟೆಲಿವಿಜ್ಞನಲ್ಲಿ ಕ್ರಿಕೆಟ್ ಮ್ಯಾಚ್

ಬೆಂಗಳೂರು — ಭಾರತ-ವೆಸ್ಟ್ ಇಂಡೀಸ್ ಕ್ರಿಕೆಟ್ ಮ್ಯಾಚ್‌ಗೆ ಟಿಕೇಟು ಸಿಕ್ಕದಿದ್ದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮ್ಯಾಚನ್ನು ಟೆಲಿವಿಜ್ಞ ಮಾಡಲಾಗುವುದು.



Protect the Cow

Quality Printing Neat Binding

Lakshminarasimha Press

Sivarampet, Mysore 1

ವುಡ್‌ಲಾಂಡ್ 15 11 74 ರಿಂದ

ಅಮೋಘ 2 ನೇ ವಾರ

ರಾಜೇಶ್ ಖನ್ನ, ಜೀನತ್ ಅಮಾನ್,
ಪ್ರೇಂ ಚೋಪ್ರ, ಯೋಗಿತಾ ಬಾಲಿ ಅಭಿನಯಿಸಿರುವ
ಅಪೂರ್ವ ಟೆಕ್ನಿಮೆನ್ ಕಲರ್ ಹಿಂದಿ ಕಲಾಕೃತಿ

ಅ ಜ ನಾ ಬಿ

ಸಂಗೀತ – ಆರ್. ಡಿ. ಬರ್ಮನ್ ನಿರ್ದೇಶನ – ಶಕ್ತಿ ಸಾಮಂತ್

ದಿನ 3 ಪ್ರದರ್ಶನಗಳು

ಅಪೆರಾ 15 11 74 ರಿಂದ

ಜಮೀನ್ ಆಸ್‌ಮಾನ್

ಅಶೋಕ ಕುಮಾರ್ ಸುನಿಲ್ ದತ್
ರೇಖಾ ಯೋಗಿತ ಬಾಲಿ ಅಭಿನಯಿಸಿರುವ
ಅಮೋಘ ಹಿಂದಿ ಚಿತ್ರ

ಸಂಗೀತ – ಕಿಶೋರ್ ಕುಮಾರ್

ದಿನ 3 ಪ್ರದರ್ಶನಗಳು

SHAKTI SUDHA

A Superb Tonic

Contribute Liberally to the National Defence Fund

Edited Printed and Published by Dharmaprasharanirata M S. Krishna Rao (Proprietor) at the Sotemadi Press, Chamaraja puram Mysore